**ಗೆಳೆಯ:** ಏನೋ ಗುಂಡ ಕತ್ತೆಯನ್ನು ಖರೀದಿಸುತ್ತಿದ್ದೀಯಲ್ಲ. ಯಾಕೆ?
**ಗುಂಡ:** ಯಾಕೆಂದ್ರೆ ಕತ್ತೆ ಹಾಲು ಈಗ ಲೀಟರಿಗೆ ಏಳು ಸಾವಿರ ರೂಪಾಯಿಯಂತೆ. ಮಾರಿದರೆ ಸಖತ್ ಹಣ ಬರುತ್ತದೆ ಅದಕ್ಕೆ!

***

**ವಿಮೆ ಅಧಿಕಾರಿ:** ಏನಯ್ಯಾ ನೀನು ಎಲ್ಲಾ ಬಿಟ್ಟು ಚಡ್ಡಿಯನ್ನು ಹಿಡಿದುಕೊಂಡು ನಮ್ಮಾಫೀಸಿಗೆ ಬಂದಿದ್ದೀಯಲ್ಲ. ಯಾಕೆ?
**ಗುಂಡ:** ಏನು ಮಾಡಲಿ ಸ್ವಾಮಿ! ನನ್ನ ಬಳಿ ಇರೋದು ಎರಡೇ ಚಡ್ಡಿ. ಒಗೆದು ಹೊರಗೆ ಒಣಗಲು ಹಾಕಿದಾಗ ಯಾರಾದರೂ ಸುಟ್ಟು ಹಾಕಿದ್ರೆ ಏನು ಮಾಡಲಿ? ಅದಕ್ಕೆ ವಿಮೆ ಮಾಡಿಸಲು ಬಂದಿದ್ದೇನೆ!

***

**ಗೆಳೆಯ:** ಗುಂಡ ನಿನ್ನ ಮಾಸ್ಕ್ ವ್ಯಾಪಾರ ಹೇಗೆ ನಡೆಯುತ್ತಿದೆ?
**ಗುಂಡ:** ಅಯ್ಯೋ ತುಂಬಾ ಲಾಸ್ ಆಯ್ತು ಕಣೋ.
**ಗೆಳೆಯ:** ಅರೆ ಯಾಕೆ ಏನಾಯ್ತು?
**ಗುಂಡ:** ಮಾಸ್ಕ್ ಹಾಕಿಕೊಳ್ಳುವ ಕೊರೊನಾ ರೋಗವೇ ಕಡಿಮೆಯಾಗಿ ಹೋಯ್ತಲ್ಲ!

***

**ಮಗ:** ಅಪ್ಪಾ... ಮೇಲೆ ಹಾರಾಡ್ತಾ ಇದೆಯಲ್ಲ, ಆ ವಿಮಾನ ಎಲ್ಲಿಗೆ ಹೋಗ್ತಾ ಇದೆ?
**ತಂದೆ:** ಸ್ವರ್ಗಕ್ಕೆ.
**ಮಗ:** ಹಾಗಾದರೆ ಅದರಲ್ಲಿರುವವರು ಸ್ವರ್ಗವನ್ನು ಯಾವಾಗ ತಲುಪುತ್ತಾರೆ?
**ತಂದೆ:** ಅದರಲ್ಲಿನ ಇಂಧನ ಖಾಲಿಯಾದ ತಕ್ಷಣ.

***

**ಪೊಲೀಸ್:** ಏನ್ರೀ... ಕುದುರೆ ಗಾಡಿಯಲ್ಲಿ ಹೋಗ್ತಾ ಇದೀರಲ್ಲ. ಎಲ್ಲಿಗೆ?
**ಗುಂಡ:** ಆಫೀಸಿಗೆ ಸರ್.
**ಪೊಲೀಸ್:** ಯಾಕೆ?
**ಗುಂಡ:** ಇದಕ್ಕೆ ಪೆಟ್ರೋಲ್, ಡೀಸೆಲ್, ಹಾರನ್, ಬ್ರೇಕ್ ಯಾವ್ದೂ ಬೇಕಿಲ್ವಲ್ಲ ಅದಕ್ಕೆ.

***

**ರಾಯರು:** ಪಕ್ಕದ ಮನೆಯವ ಬೆಳಿಗ್ಗೆಯಿಂದಲೂ ಅವನ ಹೆಂಡತಿಯ ಮೇಲೆ ಯಾಕೆ ಹಾಗೆ ಹಾರಾಡ್ತವ್ನೆ?
**ಹೆಂಡತಿ:** ಅವನು ಪೈಲೆಟ್ ಅಲ್ವಾ? ಅದಕ್ಕೆ.

***

**ಪ್ರೇಯಸಿ:** ನಿಂಗ್ ಒಂದ್ ವಿಷಯ ಗೊತ್ತಾ? ಇವತ್ ಬೆಳಿಗ್ಗೆ ನಾನು ಮನೆ ಬಿಟ್ಟಾಗ ಸಿಕ್ಕಾಪಟ್ಟೆ ತಲೆನೋವು ಇತ್ತು. ನಿನ್ನ ನೋಡಿದ ಮೇಲೆ ನೋವೆಲ್ಲ ಹೊರಟು ಹೋಯ್ತು!
**ಗುಂಡ:** ಅದೆಲ್ಲಿಗೂ ಹೋಗಿಲ್ಲ. ಈಗ ನನಗೆ ಬಂದು ಅಟಕಾಯಿಸಿಕೊಂಡಿದೆ!

***

**ಗುಂಡ:** ನಿನಗೆ ಶಾಖಾಹಾರ ಇಷ್ಟಾನೋ? ಮಾಂಸಾಹಾರ ಇಷ್ಟಾನೋ?
**ಪ್ರೇಯಸಿ:** ಎರಡೂ ಇಷ್ಟ ಇಲ್ಲ.
**ಗುಂಡ:** ಮತ್ತೆ ಬೇರೇನು ಇಷ್ಟ?
**ಪ್ರೇಯಸಿ:** ವಜ್ರಾಹಾರ!

***

**ಲೇಖಕ:** ಸಾರ್ ನಾನು ನಿಮ್ಮ ಪತ್ರಿಕೆಗೆ 4 ಕಥೆಗಳನ್ನು ಕಳುಹಿಸಿದ್ದೇನೆ.
**ಸಂಪಾದಕ:** ಅರೆ ಹೌದಾ? ವೆರಿಗುಡ್ ಕಥೆಗಳ ಹೆಸರೇನು?
**ಲೇಖಕ:** 'ಮರ್ಯಾದೆಯಿಂದ ಕೇಳ್ತೀನಿ,' 'ಕಥೆಗಳನ್ನು ಪ್ರಕಟಿಸಿ', 'ನಿರಾಕರಿಸಿದರೆ ಪಿತ್ತ ನೆತ್ತಿಗೇರುತ್ತದೆ' ಮತ್ತು 'ನಂತರ ಒಂದು ಕೊಲೆಯಾಗುತ್ತದೆ'!
**ಸಂಪಾದಕ:** ಚಿಂತಿಸಬೇಡಿ. ನಿಮ್ಮ ಕಥೆಗಳೆಲ್ಲವೂ ಪ್ರಕಟವಾಗುತ್ತವೆ.

ಮಿತವ್ಯಯವೇ ಸ್ವಾತಂತ್ರ್ಯ ಶತಮಾನಕ್ಕೆ ಸಂಕಲ್ಪ




ನಮ್ಮಲ್ಲಿ ಹಣವನ್ನು ನೀರಿನ ಹಾಗೆ ಖರ್ಚು ಮಾಡುವ ಅಭ್ಯಾಸ!




ಇದ್ಯಾಕೋ ಹೆಂಡ್ತಿ ಜತೆ ಬ್ರೇಕ್ ಅಪ್ ಮಾಡಿದ್ದನ್ನು ಬ್ರೇಕ್ ಫಾಸ್ಟ್ ಮಾಡಿದ ಹಾಗೆ ಹೇಳ್ತಿದ್ದಿ?




ಹಿಂದೆ ಮಳೆ ಬಂದರೆ ಖುಷಿ ಆಗ್ತಿತ್ತು. ಈಗ ಭಯವಾಗ್ತಿದೆ!

***

**ಪಂಕಜಮ್ಮ:** ರೀ... ರಾಧಮ್ಮ, ಮನೆ ಅಳಿಯ ಬೇಕಂತ ಹೇಳ್ತಾ ಇದ್ದೀರಲ್ಲ, ನಿಮ್ಮ ಬಳಿ ಅಷ್ಟೊಂದು ಆಸ್ತಿ ಇದೆಯಾ?
**ರಾಧಮ್ಮ:** ಆಸ್ತಿನೂ ಇಲ್ಲ ಅಂತಸ್ತೂ ಇಲ್ಲ. ಮನೆಯಲ್ಲಿ ರಾಶಿ ಕೆಲಸ ಇದೆ ಅದ್ಕೆ ಕೇಳ್ದೆ!

***

**ಗುಂಡ:** ಸರ್ ರಜೆ ಬೇಕು! ಧರ್ಮಸ್ಥಳಕ್ಕೆ ಹೋಗಬೇಕಾಗಿದೆ. ಅದಕ್ಕೆ ರಜೆ ಬೇಕು ಸರ್.
**ಬಾಸ್:** ಕಳೆದ ತಿಂಗಳಷ್ಟೇ ಒಂದು ವಾರ ರಜೆ ಹಾಕಿ, ಧರ್ಮಸ್ಥಳಕ್ಕೆ ಹೋಗಿದ್ರಲ್ಲ. ಮತ್ತೆ ಯಾಕೆ?
**ಗುಂಡ:** ನಿಜ ಸರ್! ಆಗ ಅಲ್ಲಿ ಸಿಕ್ಕಾಪಟ್ಟೆ ಮಳೆ ಬೀಳ್ತಿತ್ತು. ಸುರಕ್ಷಿತವಾಗಿ ಮನೆ ತಲುಪಿದ್ರೆ ಮತ್ತೆ ಬರ್ತೀನಿಂತ ಹರಕೆ ಹೊತ್ತಿದ್ದೆ ಅದಕ್ಕೆ!

***

**ಆಫೀಸರ್:** ಯಾರು ನೀನು ಯಾಕೆ ಬಂದಿದ್ದೀಯಾ?
**ಗುಂಡ:** ರಕ್ತದಾನ ಮಾಡಲು ಬಂದಿದ್ದೇನೆ ಸರ್.
**ಆಫೀಸರ್:** ನಿನ್ನನ್ನು ನೋಡಿದರೆ ಈಗಲೋ ಆಗಲೋ ಸಾಯುವ ಹಾಗೆ ಇದೀಯಾ. ಇನ್ನು ರಕ್ತಾನ ಹೇಗೆ ದಾನ ಮಾಡುತ್ತೀಯಾ?
**ಗುಂಡ:** ಹೊರಗಡೆ ಬಂದು ನೋಡಿ! ಡ್ರಮ್ಮಿನಲ್ಲಿದೆ!

***

**ಗೆಳೆಯ:** ಸತ್ತವರ ಎದುರಿಗೆ ತಮಟೆ, ಡೋಲು ಬಾರಿಸುತ್ತಾರಲ್ಲ ಯಾಕೆ?
**ಗುಂಡ:** ಅದು ಫೈನಲ್ ಟೆಸ್ಟ್ ಕಣೋ! ತಮಟೆ, ಡೋಲಿನೇಟಿಗೂ ಏಳದಿದ್ದರೆ ಅವನು ನಿಜವಾಗಿಯೂ ಸತ್ತುಹೋಗಿದ್ದಾನೆಂದೇ ಅರ್ಥ!

***

**ಗುಂಡ:** ಓನರ್ ಆಂಟಿಯನ್ನು ನೋಡಿದ್ರೆ ಜಗಳವಾಡ್ತಿಯಲ್ಲಾ ಯಾಕೆ?
**ಹೆಂಡತಿ:** ಯಾಕೋ ಗೊತ್ತಿಲ್ಲಾರೀ! ಅವರನ್ನು ನೋಡಿದ ತಕ್ಷಣ ನನಗೆ ನಿಮ್ಮಮ್ಮನ ನೆನಪೇ ಆಗುತ್ತೆ. ಅದಕ್ಕೆ!

***

**ಗುಂಡ:** ನಾಳೆ ಬೆಳಿಗ್ಗೆ ತಿಂಡಿ ಏನು ಮಾಡ್ತೀಯಾ?
**ಹೆಂಡತಿ:** ರವೆ ಬಿರಿಯಾನಿ.
**ಗುಂಡ:** ಅದ್ಯಾವುದೇ ರವೆ ಬಿರಿಯಾನಿ?
**ಹೆಂಡತಿ:** ನಥಿಂಗ್ ಬಟ್ ಉಪ್ಪಿಟ್ಟು! ಉಪ್ಪಿಟ್ಟು ಅಂತ ಹೇಳಿದ್ರೆ ನೀವು ವ್ಯಾಕರಿಸುತ್ತೀರಲ್ಲಾ ಅದಕ್ಕೆ ಹಾಗೆ ಹೇಳ್ದೆ!

***

**ಗುಂಡ:** ಗಂಡಸರು ಹೆಂಗಸರಿಗೆ ತಾಳಿ ಕಟ್ಟುವಂತೆ ಹೆಂಗಸರು ಗಂಡಸರಿಗೆ ತಾಳಿ ಕಟ್ಟುವ ಕಾಲ ಬರಬಹುದಾ?
**ಗೆಳತಿ:** ಅಯ್ಯೋ ಖಂಡಿತ ಇಲ್ಲ. ಪ್ರಾಣಿಗಳಿಗೆ ಯಾರಾದರೂ ತಾಳಿ ಕಟ್ಟುತ್ತಾರೆಯೇ?

***

**ಮಗ:** ಅಪ್ಪ ಅಪ್ಪ... ನನಗೆ ಬುದ್ಧಿ ಎಲ್ಲಿಂದ ಬಂತು?
**ತಂದೆ:** ನಿಮ್ಮಮ್ಮನಿಂದ ಬಂದಿದೆ.
**ಮಗ:** ಅಮ್ಮನಿಂದಲೇ ಅಂತ ಹೇಗೆ ಹೇಳ್ತೀಯಾ?
**ತಂದೆ:** ಹೇಗೆ ಅಂದರೆ ನನ್ನ ಬುದ್ಧಿ ನೇರವಾಗಿದೆ!

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು